# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ

## ಸಿ.ಸಿ.ನಂಃ 409/ 2014

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಶಿವಮೊಗ್ಗ ರೈಲ್ವೆ ಪೋಲೀಸರು, ಶಿವಮೊಗ್ಗ

**-: ವಿರುದ್ಧ :-**

**ಆರೋಪಿಗಳುಃ**

1. ಶ್ರೀ ಹರೀಶ ಯಾನೆ ವೆಸ್ಟ್,
ಬಿನ್ ಶ್ರೀ ವೆಂಕಟೇಶಪ್ಪ,
ವಯಸ್ಸು 23 ವರ್ಷಗಳು,
ವಾಸಃ 2 ನೇ ಕ್ರಾಸ್, ಕೊರಚರ ಕಾಲೋನಿ,
ಹೊಸದುರ್ಗ ರಸ್ತೆ, ಚಿತ್ರದುರ್ಗ.

2. ಶ್ರೀ ಭಾಸ್ಕರ,
ಬಿನ್ ಶ್ರೀ ಶಂಭು,
ವಯಸ್ಸು 23 ವರ್ಷ,
ವಾಸಃ ನಜೀರ್ ಸಾಬ್ ಬಡಾವಣೆ,
ಉರ್ದು ಶಾಲೆ ಹತ್ತಿರ,
ಕಡೂರು.

3. ಹರೀಶ್ ಯಾನೆ ಡಾಂಬರ್
ಬಿನ್ ಲೇಟ್ ಶ್ರೀ ನಾಗರಾಜು,
(ಕೇಸನ್ನು ಪ್ರತ್ಯೇಕಿಸಲಾಗಿದೆ).

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ

**ಪ್ರಶ್ನೆ-1:** ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

**ಉತ್ತರ:**

ಆರೋಪಿ-1 Yes

ಆರೋಪಿ-2 Yes

**ಪ್ರಶ್ನೆ-2:** ಅಭಿಯೋಜನೆಯ ಪರವಾಗಿ **ಚಾಸಾ-1** ರವರಾದ ಶ್ರೀ ಚಂದ್ರಶೇಖರ ಇವರನ್ನು **ಪ್ರಾಸಾ-1** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-2 ಅವರ ಅಕ್ಕ, ದಿನಾಂಕ 23.01.2014 ರಂದು ಅವರು ಚಾಸಾ-2 ರವರೊಂದಿಗೆ ಶಿವಮೊಗ್ಗ-ಬೆಂಗಳೂರು ಪ್ಯಾಸೆಂಜರ್ ರೈಲಿನಲ್ಲಿ ತಿಪಟೂರಿನಿಂದ ತರೀಕೆರೆಗೆ ರೈಲಿನಲ್ಲಿ ಬರುತ್ತಿದ್ದಾಗ, ಸದರಿ ಟ್ರೈನು

ಶಿವಪುರದ ಬಳಿ ಬಂದು ನಿಂತಿದ್ದಾಗ ಚಾಸಾ–2 ರವರು ಸೀಟಿನಲ್ಲಿ ನಿದ್ದೆ ಮಾಡುತ್ತಿದ್ದು, ಅವರ ಕೊರಳಿನಲ್ಲಿ ಇದ್ದ ಚಿನ್ನದ ಸರವನ್ನು ಕಿತ್ತುಕೊಂಡು ರೈಲು ಚಲಿಸುತ್ತಿದ್ದಾಗ ರೈಲಿನಿಂದ ಜಿಗಿದು ಪರಾರಿಯಾಗಿರುತ್ತೀರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –3:** **ಫ್ರಾಸಾ–1** ರವರು ಮುಂದುವರೆದು, ಚಾಸಾ–2 ರವರ ತಾಳಿ, ಗುಂಡುಗಳು ಮತ್ತು ಚಿನ್ನದ ಟ್ಟಿ ಸೇರಿ ಒಟ್ಟು 15 ಗ್ರಾಂ ಚಿನ್ನವನ್ನು ಕಿತ್ತುಕೊಂಡು ಹೋಗಿದ್ದು, ನಂತರ ಅವರು ಚಲಾಯಿಸುತ್ತಿದ್ದ ರೈಲಿನಲ್ಲಿ ಬಗ್ಗಿ ನೋಡಿದಾಗಿ ಒಬ್ಬ ವ್ಯಕ್ತಿ ಓಡಿಹೋಗಿರುವುದವನ್ನು ಅವರು ನೋಡಿರುತ್ತಾರೆಂದು, ನಂತರ ಸದರಿ ಟ್ರೈನು ಮುಂದೆ ಚಲಿಸಿರುತ್ತದೆಂದು, ಈ ಬಗ್ಗೆ ತರೀಕೆರೆ ರೈಲ್ವೆ ಪೋಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –4**: ಅಭಿಯೋಜನೆಯ ಪರವಾಗಿ **ಚಾಸಾ–6** ರವರಾದ ಶ್ರೀ ಗಿರೀಶ್, ಪಿಸಿ–114, ಅರಸೀಕೆರೆ ಪೋಲೀಸ್ ಠಾಣೆ ಇವರನ್ನು **ಫ್ರಾಸಾ–2** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2014 ನೇ ಇಸವಿಯಲ್ಲಿ ಮೈಸೂರು ರೈಲ್ವೆ ವ್ಯಾಪ್ತಿಯಲ್ಲಿ ಅಂದರೆ ಮೈಸೂರು ಶಿವಮೊಗ್ಗ ರೈಲು ಮಾರ್ಗದಲ್ಲಿ ಸುಲಿಗೆ ಮತ್ತು ಕಳವು ಪ್ರಕರಣಗಳು ರೈಲಿನಲ್ಲಿ ಹೆಚ್ಚಾಗುತ್ತಿದ್ದು ಅದಕ್ಕೆ ಸಂಬಂಧಪಟ್ಟಂತೆ ಚಾಸಾ–9 ರವರು ಆರೋಪಿಗಳನ್ನು ಪತ್ತೆ ಮಾಡಲು ಮತ್ತು ಸದರಿ ಸುಲಿಗೆ ಮತ್ತು ಕಳವು ಪ್ರಕರಣಗಳನ್ನು ತಡೆಯಲು ಒಂದು ತಂಡವನ್ನು ರಚಿಸಿದ್ದು ಸದರಿ ತಂಡದಲ್ಲಿ ಶಿವಮೊಗ್ಗ ವೃತ್ತದಿಂದ ಅವರು, ಚಾಸಾ–5, 7 ರವರು ಇದ್ದು ನಂತರ ಅರಸೀಕೆರೆ ರೈಲ್ವೆ ಪೋಲೀಸ್ ಠಾಣೆಯಿಂದ ಗುರುಮೂರ್ತಿ, ಮಣಿಕಂಠ ಮತ್ತು ಮಂಜು ಎಂಬ ಪೊಲೀಸರನ್ನು ನಮ್ಮ ತಂಡಕ್ಕೆ ಸೇರಿಸಿದ್ದರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –5:** **ಫ್ರಾಸಾ–2** ರವರು ಮುಂದುವರೆದು, ಅವರ ತಂಡದೊಂದಿಗೆ ಚಾಸಾ–9 ರವರು ಅರಸೀಕೆರೆ ನಿಂದ ಬೀರೂರು ರೈಲ್ವೆ ಮಾರ್ಗದಲ್ಲಿ ಅನುಮಾನಸ್ಪದ ವ್ಯಕ್ತಿಗಳನ್ನು ರೈಲ್ವೆ ಬೋಗಿಗಳಲ್ಲಿ ವ್ಯಕ್ತಿಗಳ ಮೇಲೆ ನಿಗಾ ಇಡುತ್ತಿದ್ದು ನಂತರ ಮೈಸೂರು ಮತ್ತು ಶಿವಮೊಗ್ಗ ಇಂಟರ್ ಸಿಟಿ ರೈಲು ಗಾಡಿಯಲ್ಲಿ ಬೀರೂರು ರೈಲ್ವೆ ನಿಲ್ದಾಣದಲ್ಲಿ ಬಂದು ಇಳಿದಾಗ ಅಲ್ಲಿ ರೈಲ್ವೆ ಪ್ಲಾಟ್ ಫಾರ್ಮನಲ್ಲಿ ಒಬ್ಬ ವ್ಯಕ್ತಿಯು ಅವರನ್ನು ನೋಡಿ ಓಡಿ ಹೋಗಲು ಪ್ರಾರಂಬಿಸಿದ್ದು ನಂತರ ಸದರಿ ವ್ಯಕ್ತಿಯನ್ನು ಅವರುಗಳು ಹಿಡಿದುಕೊಂಡು ಬಂದಿರುತ್ತೇವೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ–6:** **ಫ್ರಾಸಾ–2** ರವರು ಮುಂದುವರೆದು, ಸದರಿ ದಿನ ದಿಃ08.03.2014 ಆಗಿರುತ್ತದೆಂದು, ನಂತರ ಸದರಿ ವ್ಯಕ್ತಿಯನ್ನು ಚಾಸಾ–9 ರವರ ಮುಂದೆ ಹಾಜರು ಪಡಿಸಿರುತ್ತೇವೆಂದು, ಸದರಿ ವ್ಯಕ್ತಿಯನ್ನು ಹೆಚ್ಚಿನ ವಿಚಾರಣೆಗೆ ಶಿವಮೊಗ್ಗದ ಅವರ ರೈಲ್ವೆ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆಂದು, ನಂತರ ಸದರಿ ವ್ಯಕ್ತಿ ಚಾಸಾ–9 ರವರ ಮುಂದೆ ಆತನ ಸ್ವ–ಇಚ್ಛಾ ಹೇಳಿಕೆ ನೀಡಿರುತ್ತಾನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ–7:** **ಫ್ರಾಸಾ–2** ರವರು ಮುಂದುವರೆದು, ಆರೋಪಿಯಾದ ನೀವು ನಿಮ್ಮ ಹೇಳಿಕೆಯಲ್ಲಿ ದಿಃ23.01.2014 ರಂದು ನೀವು ಮತ್ತು ಇನ್ನಿಬ್ಬರು ವ್ಯಕ್ತಿಗಳೊಂದಿಗೆ ಕಡೂರಿನಿಂದ ಅರಸೀಕೆರೆಗೆ ಬಸ್ಸಿನಲ್ಲಿ ಹೋಗಿದ್ದು ಸದರಿ 3 ವ್ಯಕ್ತಿಗಳು ಶಿವಮೊಗ್ಗದ ಪ್ಯಾಸೆಂಜರ್ ರೈಲು ಗಾಡಿಯಲ್ಲಿ ಹತ್ತಿಕೊಂಡು ಬಂದಿದ್ದು ಶಿವಪುರದ ರೈಲ್ವೆ ನಿಲ್ದಾಣದಲ್ಲಿ ಸದರಿ ರೈಲು ನಿಂತಾಗ ಒಬ್ಬರು ಹೆಂಗಸು ಮಲಗಿದ್ದಾಗ ಆಕೆಯ ಕುತ್ತಿಗೆಯಿಂದ ಸರವನ್ನು ಕಿತ್ತುಕೊಂಡಿದ್ದು ಚಲಿಸುವ ರೈಲು

ಗಾಡಿಯಿಂದ ಇಳಿದು ಓಡಿ ಹೋಗಿದ್ದು, ಅವರೊಂದಿಗೆ ಇತರ ಆರೋಪಿಗಳು ಸಹಃ ಓಡಿ ಹೋಗಿರುವುದಾಗಿ ತಿಳಿಸಿರುತ್ತೀರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –8:** **ಫ್ರಾಸಾ–2** ರವರು ಮುಂದುವರೆದು, ನಂತರ ಸದರಿ ಸರವನ್ನು ಆಭರಣ ಅಂಗಡಿಗೆ ಮಾರಾಟ ಮಾಡಲು ಹೋದಾಗ ಸದರಿ ಸರ ಮಾಂಗಲ್ಯ ಸರ, ಗಿಲಿಟ್ ಸರವಾಗಿದ್ದು ತಾಳಿ ಮತ್ತು ಕಡ್ಡಿ ಚಿನ್ನದ್ದಾಗಿರುತ್ತದೆ ಎಂದು ತಿಳಿಸಿರುತ್ತಾರೆಂದು, ನಂತರ ಸದರಿ ಗಿಲಿಟ್ ಸರವನ್ನು ಒಂದು ಚರಂಡಿಗೆ ಬೀಸಾಕಿರುವುದಾಗಿ ಹೇಳಿಕೆಯಲ್ಲಿ ತಿಳಿಸಿರುತ್ತೀರೆಂದು, ನಂತರ ತಾಳಿ ಮತ್ತು ಕಡ್ಡಿ ಯನ್ನು ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತೀರೆಂದು, ಅವರು ಹಿಡಿದ ಆರೋಪಿತನ ಹೆಸರು ಹರೀಶ ಯಾನೆ ಡಾಂಬರ್ ಮತ್ತು ಇನ್ನಿಬ್ಬರು ಆರೋಪಿತರ ಹೆಸರು ಭಾಸ್ಕರ ಮತ್ತು ಹರೀಶ ಯಾನೆ ವೇಸ್ಟ್ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ–9:** ಅಭಿಯೋಜನೆಯ ಪರವಾಗಿ **ಚಾಸಾ–2** ರವರಾದ ಶ್ರೀಮತಿ ಲಕ್ಷ್ಮಿದೇವಮ್ಮ ಇವರನ್ನು **ಫ್ರಾಸಾ–4** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ 23.01.2014 ರಂದು ಅವರು ಮತ್ತು ಚಾಸಾ–1 ರವರು ತಿಪಟೂರಿನ ಶಾರದ ನಗರ ರೈಲು ನಿಲ್ದಾಣದಲ್ಲಿ 2 ಟಿಕೇಟ್ ಗಳನ್ನು ತರೀಕೆರೆಗೆ ಖರೀದಿ ಮಾಡಿ ಬೆಂಗಳೂರು ಶಿವಮೊಗ್ಗ ಪ್ಯಾಸೆಂಜರ್ ರೈಲಿನಲ್ಲಿ ರಾತ್ರಿ 09.00 ಗಂಟೆಗೆ ಹೊರಟು ಸುಮಾರು 10.45 ರ ಸುಮಾರಿಗೆ ಶಿವಪುರ ರೈಲ್ವೆ ನಿಲ್ದಾಣದಲ್ಲಿ ನಿಲ್ಲಿಸಿ ಹೊರಡಲು ಆರಂಭವಾಗಿದ್ದು ನಿಧಾನವಾಗಿ ಸದರಿ ರೈಲು ಚಲಿಸುತ್ತಿರುವಾಗ ಹಿಂದಿನಿಂದ 3 ನೇ ಬೋಗಿಯಲ್ಲಿ ಹಿಂದಿನ ಆಸನದ ಬಳಿ ಅವರು ಉದ್ದನೆಯ ಸೀಟಿನಲ್ಲಿ ಮಲಗಿದ್ದು ಚಾಸಾ–1 ರವರು ಎದುರುಗಡೆ ಕಿಟಕಿ ಬಳಿಯ ಆಸನದಲ್ಲಿ ಕುಳಿತ್ತಿದ್ದು ಅವರು ಕಿಟಕಿ ಕಡೆಗೆ ತಲೆ ಹಾಕಿ ಮಲಗಿದ್ದೆನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –10:** **ಫ್ರಾಸಾ–4** ರವರು ಮುಂದುವರೆದು, ಸದರಿ ಬೋಗಿಯಲ್ಲಿ ಅವರು ಮತ್ತು ಚಾಸಾ–1 ರವರು ಮಾತ್ರ ಇದ್ದು ಸದರಿ ಆಸನದ ನಂತರ ಆಸನದಲ್ಲಿ 5–6 ಜನ ಕುಳಿತ್ತಿದ್ದರು, ಆ ಸಮಯದಲ್ಲಿ ರೈಲಿನಲ್ಲಿ ಇದ್ದ ಒಬ್ಬ ವ್ಯಕ್ತಿ ಅವರ ತಾಳಿಯ ಚೈನ್ ಅನ್ನು ಕಿತ್ತುಕೊಂಡು ಸದರಿ ಬೋಗಿಯ ಬಾಗಿಲಿನಿಂದ ಹೊರಗಡೆಗೆ ಓಡಿ ಹೋಗಿರುತ್ತಾನೆಂದು, ಸದರಿ ತಾಳಿ ಚೈನ್ ಮಾತ್ರ ನಕಲಿ ಆಗಿದ್ದು ಅದಕ್ಕೆ ಅವರು 3 ಗ್ರಾಂ ತೂಕದ ಬಂಗಾರದ ಕಡ್ಡಿ ಮತ್ತು ಅದಕ್ಕೆ ಜೋಡಿಸಿದ 5 ಗ್ರಾಂ ತೂಕದ ಬಂಗಾರದ ತಾಳಿ ಹಾಗೂ 2 ಗ್ರಾಂ ತೂಕದ 2 ಗುಂಡುಗಳನ್ನು ಹಾಗೂ ತಲಾ 1 ಸಾವಿರ ಬೆಲೆ ಬಾಳುವ 2 ಹವಳ ಹಾಕಿದ್ದೆನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –11:** **ಫ್ರಾಸಾ–4** ರವರು ಮುಂದುವರೆದು, ಸದರಿ ನಕಲು ಚೈನಿಗೆ ಅವರು ಖರೀದಿ ಮಾಡುವ ಸಮಯದಲ್ಲಿ 3 ಗ್ರಾಂ ಬಂಗಾರದ ಲೇಪನವನ್ನು ಮಾಡಿರುವುದಾಗಿ ಅವರಿಗೆ ತಿಳಿಸಿದ್ದರೆಂದು, ಆ ಸಮಯಕ್ಕೆ ಸದರಿ ಆಭರಣಗಳ ಮೌಲ್ಯ ಒಟ್ಟು 20 ಸಾವಿರಗಳಾಗಿರುತ್ತದೆಂದು, ಆ ಸಮಯದಲ್ಲಿ ಕತ್ತಲಾಗಿದ್ದ ಕಾರಣ ಮತ್ತು ರೈಲು ಚಲಿಸುತ್ತಿದ್ದ ಕಾರಣ ಹಾಗೂ ಅವರು ಆರೋಪಿಗಳನ್ನು ಹಿಂಬಾಲಿಸಿದರೆ ಅವರ ಜೊತೆ ಇರುವವರ ಬಗ್ಗೆ ಅವರಿಗೆ ಯಾವುದೇ ಮಾಹಿತಿ ಇಲ್ಲದ ಕಾರಣ ಮತ್ತು ಅವರಿಗೆ ಪೆಟ್ಟಾಗಬಹುದಾಗಿದ್ದ ಕಾರಣ ಅವನನ್ನು ಹಿಂಬಾಲಿಸಲಿಲ್ಲವೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –12:** **ಫ್ರಾಸಾ–4** ರವರು ಮುಂದುವರೆದು, ಅವರು ಆ ಸಮಯದಲ್ಲಿ ಕೂಗಿಕೊಂಡಿದ್ದು ಆಗ ಚಾಸಾ–1 ರವರು ಮತ್ತು ಸದರಿ ಬೋಗಿಯಲ್ಲಿ ಇದ್ದ ಇತರೆ ಪ್ರಯಣಿಕರು ಅವರ ಬಳಿ ಬಂದಿದ್ದು ಅಷ್ಟರಲ್ಲಿ ರೈಲು ವೇಗವಾಗಿ ಚಲಿಸಲು ಆರಂಭ ಮಾಡಿದ್ದು,

ಸದರಿ ರೈಲು ತರೀಕೆರೆ ರೈಲ್ವೆ ನಿಲ್ದಾಣಕ್ಕೆ ಬಂದಿದ್ದು ಸದರಿ ರೈಲ್ವೆ ನಿಲ್ದಾಣದಲ್ಲಿ ಇದ್ದ ಕಚೇರಿಯಲ್ಲಿ ಸದರಿ ಕಳ್ಳತನದ ಬಗ್ಗೆ ಮಾಹಿತಿ ನೀಡಿದಾಗ ಅವರು ನಮಗೆ ಶಿವಮೊಗ್ಗದಲ್ಲಿ ದೂರನ್ನು ನೀಡುವಂತೆ ತಿಳಿಸಿರುತ್ತಾರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –13: ಫ್ರಾಸಾ–4** ರವರು ಮುಂದುವರೆದು, ಚಾಸಾ–1 ರವರು ದಿಃ 02.02.2014 ರಂದು ದೂರನ್ನು ನೀಡಿರುತ್ತಾರೆಂದು, ಅವರ ಗಂಡನಿಗೆ ಲೀವರ್ ಸಿರೋಸಿಸ್ ಕಾಯಿಲೆ ಇದ್ದ ಕಾರಣ ರಕ್ತ ವಾಂತಿಯಾಗುತ್ತಿದ್ದು ಆ ಕಡೆಗೆ ಅವರು ಗಮನಹರಿಸಬೇಕಾಗಿದ್ದ ಕಾರಣ ದೂರನ್ನು ಚಾಸಾ–1 ರವರಿಗೆ ನೀಡಲು ತಿಳಿಸಿರುತ್ತೇನೆಂದು, ಹಾಗಾಗಿ ನಿಪಿ–1 ನ್ನು ನೀಡುವಲ್ಲಿ ತಡವಾಗಿರುತ್ತದೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –14: ಫ್ರಾಸಾ–4** ರವರು ಮುಂದುವರೆದು, ದಿನಾಂಕ 08.03.2014 ರಲ್ಲಿ ಮೈಸೂರು ರೈಲ್ವೆ ಪೊಲೀಸರು ಚಾಸಾ–1 ರವರಿಗೆ ದೂರವಾಣಿ ಮಾಡಿ ಅವರ ಆಭರಣಗಳು ಮತ್ತು ಆರೋಪಿತರು ದೊರೆತ್ತಿದ್ದು ಅದನ್ನು ಗುರುತಿಸಲು ಶಿವಮೊಗ್ಗದ ರೈಲ್ವೆ ಪೊಲೀಸ್ ಠಾಣೆಗೆ ಹೋಗಲು ತಿಳಿಸಿದ್ದರೆಂದು, ನಂತರ ಚಾಸಾ–1 ರವರು ಸದರಿ ವಿಚಾರವನ್ನು ಅವರಿಗೆ ತಿಳಿಸಿದ್ದು, ದಿಃ 08.03.2014 ರಂದು ಅವರು ಮತ್ತು ಚಾಸಾ–1 ರವರು ಶಿವಮೊಗ್ಗದ ರೈಲ್ವೆ ಪೊಲೀಸ್ ಠಾಣೆಗೆ ಹಾಜರಾಗಿ 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತೇವೆಂದು ಮತ್ತು ಅವರ ಆಭರಣಗಳನ್ನು ತೋರಿಸಿದ್ದು ಅದನ್ನು ಸಹ ನೋಡಿ ಗುರುತಿಸಿರುತ್ತೇವೆಂದು, ಆ ಬಗ್ಗೆ ಅವರು ತನ್ನ ಹೇಳಿಕೆಯನ್ನು ಸಹ ನೀಡಿರುತ್ತೇನೆಂದು, ನಿಪಿ–1 ರ ಜೊತೆಯಲ್ಲಿ ಅವರು ಖರೀದಿ ಮಾಡಿದ 2 ರೈಲ್ವೆ ಟೀಕೇಟ್ ಗಳನ್ನು ಹಾಜರು ಮಾಡಿದ್ದು, ಸದರಿ ಟೀಕೇಟ್ ಗಳ ಸಂಖ್ಯೆ 03648 ಮತ್ತು 03649 ಆಗಿರುತ್ತದೆಂದು, ತಾಳಿ ಬೊಟ್ಟು ಹಾಗೂ ಕಡ್ಡಿ ಮಾತ್ರ ಆರೋಪಿತರಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಅವರಿಗೆ ತೋರಿಸಿರುತ್ತಾರೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –15**: ಅಭಿಯೋಜನೆಯ ಪರವಾಗಿ **ಚಾಸಾ–9** ರವರಾದ ಅಶೋಕ್ ಕುಮಾರ್, ಪೋಲೀಸ್ ಉಪ ಅಧೀಕ್ಷಕರು ಇವರನ್ನು **ಫ್ರಾಸಾ–5** ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 08.03.2014 ರಂದು ಅರಸೀಕೆರೆಯಿಂದ ಶಿವಮೊಗ್ಗ ರೈಲ್ವೆ ಲೈನ್ ನಲ್ಲಿ ಹೆಚ್ಚಾಗಿ ಸರಗಳ್ಳತನ ಹಾಗೂ ನಡೆಯುತ್ತಿದ್ದ ಕಾರಣ ಇದನ್ನು ನಿಗ್ರಹಿಸುವ ಸಲುವಾಗಿ ಅವರನ್ನು ಅಧೀನ ಸಿಬ್ಬಂದಿಗಳಾದ ಚಾಸಾ–5 ರಿಂದ 7 ರವರನ್ನು ಕರೆದುಕೊಂಡು ಗಸ್ತು ಕರ್ತವ್ಯ ಮಾಡುತ್ತಿದ್ದ ಸಮಯದಲ್ಲಿ, ಬೆಳಗಿನ ಜಾವ 10.15 ಗಂಟೆ ಸಮಯದಲ್ಲಿ ಅರಸೀಕೆರೆಯಿಂದ ಬೀರೂರಿಗೆ ರೈಲ್‌ನಲ್ಲಿ ಗಸ್ತು ಕರ್ತವ್ಯ ಮಾಡುತ್ತಿದ್ದ ಸಮಯದಲ್ಲಿ ರೈಲು ಬೀರೂರಿನಲ್ಲಿ ನಿಂತು ಹೊರಡುವ ಸಮಯದಲ್ಲಿ ಒಬ್ಬ ವ್ಯಕ್ತಿಯು ಅನುಮಾನಸ್ಪದವಾಗಿ ನಡೆದುಕೊಂಡು ಬಂದು ಅವರನ್ನು ನೋಡಿ ಓಡಲು ಪ್ರಯತ್ನಿಸಿರುತ್ತಾನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –16**: **ಫ್ರಾಸಾ–5** ರವರು ಮುಂದುವರೆದು, ಆಗ ಅವರು ಅವರ ಅಧೀನ ಸಿಬ್ಬಂದಿ ಸಹಾಯದಿಂದ ಅರೋಪಿತರನ್ನು ಹಿಡಿದು ವಿಚಾರಿಸಲಾಗಿ ಅರೋಪಿತರು ಅವರಿಗೆ ಅವನ ವರ್ತನೆ ಬಗ್ಗೆ ಯಾವುದೇ ಸಮಜಾಯಿಷಿ ಉತ್ತರ ನೀಡದ ಕಾರಣ ಅನುಮಾನ ಬಂದು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತನ ಹೆಸರು ಹರೀಶ ಯಾನೆ ಡಾಂಬರ್ ಬಿನ್ ನಾಗರಾಜ್, ಕಡೂರು ನಿವಾಸಿ ಎಂದು ತಿಳಿಸಿರುತ್ತಾನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ –17**: **ಫ್ರಾಸಾ–5** ರವರು ಮುಂದುವರೆದು, ಹೆಚ್ಚಿನ ವಿಚಾರಣೆಗೆ ಅವರ ಠಾಣೆಗೆ ಕರೆದುಕೊಂಡು ಹೋಗಿ ವಿಚಾರಿಸಲಾಗಿ ಆತನು ಅವರಿಗೆ ದಿಃ 08.03.2014 ರಂದು ಒಂದು ಸ್ವ ಇಚ್ಚಾ ಹೇಳಿಕೆಯನ್ನು ನೀಡಿದ್ದು ಅದರಲ್ಲಿ "ನನ್ನನ್ನು

ಕರೆದುಕೊಂಡು ಹೋದರೆ ನಮ್ಮ ಮನೆಯಲ್ಲಿ ಇಟ್ಟಿರುವ ತಾಳಿ ಮತ್ತು ಚಿನ್ನದ ಕಡ್ಡಿಯನ್ನು ತೆಗೆದುಕೊಡುತ್ತೇನೆಂದು" ಅವರಿಗೆ ತಿಳಿಸಿರುತ್ತಾನೆಂದು, ಸದರಿ ಸ್ವ ಇಚ್ಛಾ ಹೇಳಿಕೆಯ ಆಧಾರದಲ್ಲಿ ಆರೋಪಿಯಾದ ನಿಮ್ಮಗಳ ಜೊತೆ ಪಂಚರಾದ ಚಾಸಾ-3 ಮತ್ತು 4 ರವರನ್ನು ಕರೆದುಕೊಂಡು ಕಡೂರು ತಾಲ್ಲೂಕಿನ ಅರಸು ಬೀದಿ ಮನೆ ನಂಬರ್ 149 ಕ್ಕೆ ಹೋಗಿ ಆರೋಪಿಯಾದ ನೀವು ತೋರಿಸಿದಂತೆ ಆತನ ಮನೆಯ ಒಳಗಿನ ಒಂದು ಕೋಣೆಯಲ್ಲಿ ಇದ್ದ ಬೀರುವನ್ನು ತೆಗೆದು ನೋಡಲಾಗಿ ಅದರಲ್ಲಿ ಒಂದು ಚಿನ್ನದ ತಾಳಿ ಹಾಗೂ ಒಂದು ಚಿನ್ನದ ಕಡ್ಡಿಯು ನಮಗೆ ದೊರಕಿರುತ್ತದೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ-1 False

ಆರೋಪಿ-2 False

**ಪ್ರಶ್ನೆ -18: ಫ್ರಾಸಾ-5** ರವರು ಮುಂದುವರೆದು, ಸದರಿ ವಸ್ತುಗಳನ್ನು ತೂಕ ಮಾಡಲಾಗಿ ಚಿನ್ನದ ತಾಳಿಯು ಸುಮಾರು 5 ಗ್ರಾಂ ಮತ್ತು ಚಿನ್ನದ ಕಡ್ಡಿಯು 3 ಗ್ರಾಂ ಇರುತ್ತದೆಂದು, ನಂತರ ಸದರಿ ವಸ್ತುಗಳನ್ನು ಆ ದಿನ ಸಂಜೆ 04.00 ರಿಂದ 05.00 ಮಧ್ಯದಲ್ಲಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಮಹಜರ್ ಅನ್ನು ತಯಾರಿಸಿರುತ್ತೇನೆಂದು, ನಂತರ ಆರೋಪಿಗಳಾದ ನಿಮ್ಮನ್ನು ಮತ್ತು ಮಾಲುಗಳ ಸಮೇತ ಬಂದು ಮಾಲುಪಟ್ಟಿಗೆ ನಮೂದಿಸಿ ಮುಂದಿನ ಕ್ರಮಕ್ಕಾಗಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆಂದು, ಅದೇ ದಿನ ಪಂಚರ ಹೇಳಿಕೆ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆಂದು, ಅದೇ ರೀತಿ ಪಿರ್ಯಾದುದಾರರ ಹಾಗೂ ಅವರ ತಂಗಿ ಲಕ್ಷ್ಮೀದೇವಿ ರವರ ಮರು ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ-1 False

ಆರೋಪಿ-2 False

**ಪ್ರಶ್ನೆ -19: ಫ್ರಾಸಾ-5** ರವರು ಮುಂದುವರೆದು, ಸದರಿ ಮರು ಹೇಳಿಕೆ ಪ್ರಕಾರ ಸದರಿ ಆಭರಣಗಳು ಅವರ ಆಭರಣ ಎಂದು ಹೇಳಿ ಗುರುತಿಸಿರುತ್ತಾರೆಂದು, ನಂತರದಲ್ಲಿ ನೀವು ಆರೋಪಿ ಹರೀಶ ತಿಳಿಸಿದಂತೆ ಅವನ ಸಹಚರರಾದ ಇನ್ನಿಬ್ಬರು ಆರೋಪಿಗಳಾದ ಹರೀಶ ಯಾನಿ ವೇಸ್ಟ್ ಹಾಗೂ ಭಾಸ್ಕರ್ ಎನ್ನುವವರು ಮತ್ತೊಂದು ಪ್ರಕರಣದಲ್ಲಿ ಸಜಾ ಬಂದಿಯಾದ ಕಾರಣ ಅವರ ವಿರುದ್ದ ಬಾಡಿ

ವಾರೆಂಟ್ ಹೊರಡಿಸಲು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆಂದು, ದಿಃ 17.06.2014 ರಂದು ಆರೋಪಿಗಳಾದ ನಿಮ್ಮ ವಿರುದ್ಧ ಮೇಲ್ನೋಟಕ್ಕೆ ಪ್ರಕರಣ ಸಾಬೀತಾಗಿದ್ದ ಕಾರಣ ಅವರ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:

ಆರೋಪಿ–1 False

ಆರೋಪಿ–2 False

**ಪ್ರಶ್ನೆ–20:** ನಿಮಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ?

ಉತ್ತರ:

ಆರೋಪಿ–1 Not at this moment

ಆರೋಪಿ–2 Not at this moment

**ಪ್ರಶ್ನೆ–21:** ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರ:

ಆರೋಪಿ–1 No

ಆರೋಪಿ–2 No

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೆನೆಂದು ಧೃಡೀಕರಿಸುತ್ತೇನೆ )

**ದಿನಾಂಕಃ 04.02.2026**

(ರಾಹುಲ್ ಶೆಟ್ಟಿಗಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ತರೀಕರೆ

1 ನೇ ಆರೋಪಿಃ

2 ನೇ ಆರೋಪಿಃ